# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1368
ಸದಸ್ಯರ ಹೆಸರು: ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ)
ಉತ್ತರಿಸ ಬೇಕಾದ ದಿನಾಂಕ : 22.08.2025
ಉತ್ತರಿಸುವವರು: ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು.

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಅಧೀನದಲ್ಲಿ ನಡೆಯುತ್ತಿರುವ ಸರ್ಕಾರಿ ಅಂಧ, ಶ್ರವಣನ್ಯೂನ್ಯತೆ ಮತ್ತು ಬುದ್ಧಿಮಾಂದ್ಯ ಮಕ್ಕಳ ವಿಶೇಷ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರಾಥಮಿಕ ಶಾಲಾ ಸಹಾಯಕ ಶಿಕ್ಷಕರು ದೈಹಿಕ ಶಿಕ್ಷಕರು. ಸಂಗೀತ ಶಿಕ್ಷಕರು ದರ್ಜೆ-3 ಮತ್ತು ಪ್ರೌಢ ಶಾಲೆಯ ಸಂಗೀತ ಶಿಕ್ಷಕರ ದರ್ಜೆ-2ರ ಹುದ್ದೆಯ ಮೂಲವೇತನ ಶ್ರೇಣಿ ವ್ಯತ್ಯಾಸವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ, ಕೈಗೊಂಡ ಕ್ರಮಗಳೇನು; | ವಿಕಲಚೇತನರ ಹಾಗೂ ಹಿರಿಯ ನಾಗರಿಕ ಸಬಲೀಕರಣ ಇಲಾಖೆಯ ಅಧೀನದಲ್ಲಿ ನಡೆಯುತ್ತಿರುವ ಸರ್ಕಾರಿ ಅಂಧ, ಶ್ರವಣನ್ಯೂನ್ಯತೆ ಮತ್ತು ಬುದ್ಧಿಮಾಂದ್ಯ ಮಕ್ಕಳ ವಿಶೇಷ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರಾಥಮಿಕ ಶಾಲಾ ಸಹಾಯಕ ಶಿಕ್ಷಕರು, ದೈಹಿಕ ಶಿಕ್ಷಕರು, ಸಂಗೀತ ಶಿಕ್ಷಕರು ದರ್ಜೆ-3 ಮತ್ತು ಪ್ರೌಢ ಶಾಲೆಯ ಸಂಗೀತ ಶಿಕ್ಷಕರ ದರ್ಜೆ-2ರ ಹುದ್ದೆಯ ಮೂಲವೇತನ ಶ್ರೇಣಿ ವ್ಯತ್ಯಾಸವಿರುವುದು ಸರ್ಕಾರದ ಗಮನಕ್ಕೆ ಬಂದಿದೆ.<br><br>ಈ ಸಂಬಂಧ ಮಾನ್ಯ ಕರ್ನಾಟಕ ಆಡಳಿತ ಮಂಡಳಿ, ಕಲಬುರ್ಗಿ ವಿಭಾಗೀಯ ಪೀಠದಿಂದ ಅರ್ಜಿದಾರರು ಸಲ್ಲಿಸಿದ ಮನವಿಯನ್ನು ಪರಿಗಣಿಸುವಂತೆ ನೀಡಲಾದ ಆದೇಶದನ್ವಯ ಈ ಬಗ್ಗೆ ಇಲಾಖಾ ವತಿಯಿಂದ ನಡೆಯುತ್ತಿರುವ ಅಂಧ ಮತ್ತು ಕಿವುಡ ಮಕ್ಕಳ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪದವಿ ಪೂರ್ವ ಸಹಾಯಕ ಶಿಕ್ಷಕರು, ಸಂಗೀತ ಶಿಕ್ಷಕರು-1, ಸಂಗೀತ ಶಿಕ್ಷಕರು-2 ಮತ್ತು ಸಂಗೀತ ಶಿಕ್ಷಕರು -3, ದೈಹಿಕ ಶಿಕ್ಷಕರುಗಳ ಹಾಗೂ ಮಂದಮತಿ ಮಹಿಳೆಯರ ಗೃಹಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬುದ್ಧಿಮಾಂದ್ಯ ಮಕ್ಕಳ ಪದವಿ ಪೂರ್ವ ಸಹಾಯಕ ಶಿಕ್ಷಕರ ವೇತನ ತಾರತಮ್ಯವನ್ನು ಶಿಕ್ಷಣ ಇಲಾಖೆಯಲ್ಲಿರುವಂತೆ ನಿಯಮಾನುಸಾರ ಪರಿಷ್ಕರಿಸುವ ಕ್ರಮ ಪ್ರಕ್ರಿಯೆಯಲ್ಲಿದೆ. |
| ಆ) | ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು 2004 ರಿಂದ ಇಲ್ಲಿಯವರೆಗೆ ಸಮಗ್ರವಾಗಿ ಪರಿಷ್ಕರಣೆಗೊಂಡಿರುವುದಿಲ್ಲ ಏಕೆ: (ಮಾಹಿತಿ ನೀಡುವುದು) | ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು 2004ರಲ್ಲಿ ಅನುಷ್ಠಾನಗೊಂಡಿದ್ದು, ತದನಂತರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಇತರೆ ಇಲಾಖೆಗಳಿಂದ ವರ್ಗಾವಣೆಗೊಂಡಂತಹ ಹುದ್ದೆಗಳು ಮತ್ತು ಹೊಸದಾಗಿ ಸೃಜನೆಗೊಂಡ ಹುದ್ದೆಗಳನ್ನೊಳಗೊಂಡಂತೆ ಆಯುಕ್ತರು, ಅಂಗವಿಕಲರ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ ಕಛೇರಿಗೆ ಮಂಜೂರಾದ ಹುದ್ದೆಗಳು ಹಾಗೂ ಸರ್ಕಾರಿ ಕಿವುಡು ಮಕ್ಕಳ ಶಾಲೆ ಬೆಂಗಳೂರು ಇಲ್ಲಿನ ಕೆಲ ಹುದ್ದೆಗಳನ್ನು ರದ್ದುಪಡಿಸಿ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮದಲ್ಲಿ ಸೇರ್ಪಡೆಗೊಳಿಸುವ ಕ್ರಮ ಪ್ರಕ್ರಿಯೆಯಲ್ಲಿದೆ. |
| ಇ) | ಇಲಾಖೆಯಲ್ಲಿನ ಕೆಲವು ವೃಂದದ ನೌಕರರಿಗೆ ಮುಂಬಡ್ತಿ ನೀಡಲು ಸರ್ಕಾರದ ಆದೇಶವಾಗಿದ್ದರೂ ಕೂಡ ಮುಂಬಡ್ತಿ ನೀಡಲು ವಿಳಂಬ ಮಾಡುತ್ತಿರಲು ಕಾರಣವೇನು; | ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಕಲ್ಯಾಣ ಕರ್ನಾಟಕ ವೃಂದಗಳಿಗೆ ಹುದ್ದೆಗಳನ್ನು ಮೀಸಲಿರಿಸಿ ಅಧಿಸೂಚನೆಯನ್ನು ಹೊರಡಿಸುವ ಕ್ರಮ ಪ್ರಕ್ರಿಯೆಯಲ್ಲಿದೆ. |

<table>
<tr>
<td>ಈ)</td>
<td>ಇಲಾಖೆಯಲ್ಲಿ ನಡೆಯುತ್ತಿರುವ ಸರ್ಕಾರಿ ಮತ್ತು 1982ರ ಅನುದಾನಿತ ವಿಶೇಷ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ವೃಂದದ ಶಿಕ್ಷಕರ ಮೂಲವೇತನ ಶ್ರೇಣಿಯ ಮಾಹಿತಿ ನೀಡುವುದು;</td>
<td>
<table>
<tr><th colspan="2">ಸರ್ಕಾರಿಶಾಲೆಗಳು</th></tr>
<tr><th>ಹುದ್ದೆಗಳು</th><th>ವೇತನಶ್ರೇಣಿ</th></tr>
<tr><td>ವಿಶೇಷ ಶಾಲೆಗಳ ಅಧೀಕ್ಷಕರು</td><td>69250-134200</td></tr>
<tr><td>ಪದವೀಧರ ಸಹಾಯಕ ಶಿಕ್ಷಕರು</td><td>54175-99400</td></tr>
<tr><td>ಮೊಬಿಲಿಟಿ ಇನ್‌ಸ್ಟ್ರಕರ್-1</td><td>54175-99400</td></tr>
<tr><td>ಸಂಗೀತ ಶಿಕ್ಷಕರು ದರ್ಜೆ-1</td><td>49050-92500</td></tr>
<tr><td>ಸಂಗೀತ ಶಿಕ್ಷಕರು ದರ್ಜೆ-2</td><td>37500-76100</td></tr>
<tr><td>ಪದವಿ ಪೂರ್ವ ಸಹಾಯಕ ಶಿಕ್ಷಕರು (ಶಾಲೆ ಮತ್ತು ಮಮಅಗ್ರ)</td><td>37500-76100</td></tr>
<tr><td>ಚಲನವಲನ ಬೋಧಕರು-2</td><td>37500-76100</td></tr>
<tr><td>ದೈಹಿಕ ಶಿಕ್ಷಕರು</td><td>37500-76100</td></tr>
<tr><td>ಸಂಗೀತ ಶಿಕ್ಷಕರು ದರ್ಜೆ-3</td><td>34100-67600</td></tr>
</table>
<table>
<tr><th colspan="2">1982ರ ಅನುದಾನಿತ ಶಾಲೆಗಳು</th></tr>
<tr><th>ಹುದ್ದೆಗಳವಿವರ</th><th>ವೇತನಶ್ರೇಣಿ</th></tr>
<tr><td>ಮುಖ್ಯೋಪಾಧ್ಯಾಯರು (ಪ್ರೌಢ)</td><td>69250–134200</td></tr>
<tr><td>ಮುಖ್ಯೋಪಾಧ್ಯಾಯರು (ಪ್ರಾಥಮಿಕ)</td><td>54175–99400</td></tr>
<tr><td>ಸಹಾಯಕ ಶಿಕ್ಷಕರು (ಪ್ರೌಢ)</td><td>54175–99400</td></tr>
<tr><td>ಸಹಾಯಕ ಶಿಕ್ಷಕರು (ಪ್ರಾಥಮಿಕ)</td><td>37500–76100</td></tr>
<tr><td>ಕರಕುಶಲ ಶಿಕ್ಷಕರು (ಪ್ರೌಢ)</td><td>54175–99400</td></tr>
<tr><td>ಕರಕುಶಲ ಶಿಕ್ಷಕರು (ಪ್ರಾಥಮಿಕ)</td><td>37500–76100</td></tr>
<tr><td>ದೈಹಿಕ ಶಿಕ್ಷಣ ಶಿಕ್ಷಕರು (ಪ್ರೌಢ)</td><td>54175–99400</td></tr>
<tr><td>ಸಂಗೀತ ಶಿಕ್ಷಕರು</td><td>37500–76100</td></tr>
<tr><td>ಹಿರಿಯ ವೃತ್ತಿ ಬೋಧಕರು</td><td>54175–99400</td></tr>
<tr><td>ಕಿರಿಯ ವೃತ್ತಿ ಶಿಕ್ಷಕರು</td><td>37500–76100</td></tr>
<tr><td>ಚಲನವಲನ ಬೋಧಕರು (ಪ್ರೌಢ)</td><td>54175–99400</td></tr>
<tr><td>ಚಲನವಲನ ಬೋಧಕರು (ಪ್ರಾಥಮಿಕ)</td><td>37500–76100</td></tr>
<tr><td>ಸ್ಪೀಚ್‌ಥೆರಪಿಸ್ಟ್</td><td>54175–99400</td></tr>
<tr><td>ಫಿಜಿಯೋಥೆರಪಿಸ್ಟ್</td><td>54175–99400</td></tr>
</table>
</td>
</tr>
<tr>
<td>ಉ)</td>
<td>ಕರ್ನಾಟಕ ಆಡಳಿತ ಮಂಡಳಿ ಕಲಬುರ್ಗಿ ವಿಭಾಗೀಯ ಪೀಠದಿಂದ 2023ರ ಜನವರಿಯಲ್ಲಿ ವೇತನ ವ್ಯತ್ಯಾಸ ಸರಿಪಡಿಸುವಂತೆ ಆದೇಶವಾಗಿದ್ದರೂ ಕೂಡ ಇಲ್ಲಿಯವರೆಗೂ ವಿಳಂಬ ಮಾಡುತ್ತಿರಲು ಕಾರಣವೇನು? (ವಿವರ ನೀಡುವುದು)</td>
<td>ಮಾನ್ಯ ಕರ್ನಾಟಕ ಆಡಳಿತ ಮಂಡಳಿ, ಕಲಬುರ್ಗಿ ವಿಭಾಗೀಯ ಪೀಠದಿಂದ ಅರ್ಜಿದಾರರು ಸಲ್ಲಿಸಿದ ಮನವಿಯನ್ನು ಪರಿಗಣಿಸುವಂತೆ ನೀಡಲಾದ ಆದೇಶದನ್ವಯ ಈ ಬಗ್ಗೆ ಇಲಾಖಾ ವತಿಯಿಂದ ನಡೆಯುತ್ತಿರುವ ಅಂಧ ಮತ್ತು ಕಿವುಡ ಮಕ್ಕಳ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪದವಿ ಪೂರ್ವ ಸಹಾಯಕ ಶಿಕ್ಷಕರು, ಸಂಗೀತ ಶಿಕ್ಷಕರು-1, ಸಂಗೀತ ಶಿಕ್ಷಕರು-2 ಮತ್ತು ಸಂಗೀತ ಶಿಕ್ಷಕರು -3, ದೈಹಿಕ ಶಿಕ್ಷಕರುಗಳ ಹಾಗೂ ಮಂದಮತಿ ಮಹಿಳೆಯರ ಗೃಹಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬುದ್ಧಿಮಾಂದ್ಯ ಮಕ್ಕಳ ಪದವಿಪೂರ್ವ ಸಹಾಯಕ ಶಿಕ್ಷಕರ ವೇತನ ತಾರತಮ್ಯವನ್ನು ಶಿಕ್ಷಣ ಇಲಾಖೆಯಲ್ಲಿರುವಂತೆ ನಿಯಮಾನುಸಾರ ಪರಿಷ್ಕರಿಸುವ ಕ್ರಮ ಪ್ರಕ್ರಿಯೆಯಲ್ಲಿದೆ.</td>
</tr>
</table>

**ಸಂಖ್ಯೆ: ಮಮಇ 309 ಪಿಹೆಚ್‌ಪಿ 2025**

(ಲಕ್ಷ್ಮೀ ಆರ್. ಹೆಬ್ಬಾಳಕರ್)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ
ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಸಚಿವರು.